


# ನಟನೊಬ್ಬನ ಅಂತ್ಯ

ಶಿಚಿಪ್‌ತ್ಸೋವ್ ದಪ್ಪ ಚರ್ಮದ ನೀಳ ಕಾಯದ ವೃದ್ಧ. ಒಂದೆಡೆ ಅವನು ಹೃದಯದ ತುಂಬ ದುಗುಡ ತುಂಬಿಕೊಂಡ ಅಪ್ಪ; ಮತ್ತೊಂದೆಡೆ ತನ್ನಲ್ಲಿ ಒಳ್ಳೆಯ ಗುಣವಿದ್ದರೂ ಲೋಕಜ್ಞಾನವಿಲ್ಲದ ಪೆದ್ದ. ನಟನಾಗಿದ್ದ ಆತನಿಗೆ ತನ್ನ ದೈಹಿಕ ಸಾಮರ್ಥ್ಯದ ಅರಿವಿತ್ತು. ಆದರೆ ನಟನೆಗೆ ಸಂಬಂಧಿಸಿದಂತೆ ತನ್ನಲ್ಲಿದ್ದ ಪ್ರತಿಭೆಯ ಅರಿವು ಇರಲಿಲ್ಲ. ನಾಟಕ ಪ್ರದರ್ಶನದ ವೇಳೆ ಹತಾಶನಾಗಿ ಒಮ್ಮೆ ಮ್ಯಾನೇಜರ್ ಜೊತೆ ಜಗಳಕ್ಕೆ ಇಳಿದ. ಇಬ್ಬರ ಮಾತೂ ತಾರಕಕ್ಕೇರುತ್ತಿದ್ದಾಗ ಶಿಚಿಪ್‌ತ್ಸೋವ್‌ನ ಎದೆಗೆ ಏನೋ ತಾಕಿದಂತೆ ಆಯಿತು. ಜಗಳ ತಾರಕಕ್ಕೆ ಏರಿ ಮಾತುಗಳು ಬಿಸಿ ಏರುತ್ತಿವೆ ಅನಿಸುವ ಹೊತ್ತು. ಮ್ಯಾನೇಜರ್ ಜುಕೋವ್ ತುಂಬ ಆವೇಶ ಪೂರ್ಣವಾಗಿ ನಗುವುದನ್ನು ರೂಢಿಸಿಕೊಂಡಿದ್ದ. ಅದು ಅವನ ನಿಯಮ. ಜೊತೆಗೆ ಮೂರ್ಛೆ ಬೀಳುತ್ತಿದ್ದ. ಅಂದಿನ ಜಗಳದ ಸಮಯದಲ್ಲೂ ಜುಕೋವ್ ಆವೇಶಪೂರ್ಣವಾಗಿ ನಕ್ಕು ಪ್ರಜ್ಞೆತಪ್ಪಿ ಬಿದ್ದ. ಜಗಳದ ಕ್ಲೈಮ್ಯಾಕ್ಸ್ ಹೀಗಾದಾಗ ಶಿಚಿಪ್‌ತ್ಸೋವ್ ಆ ಜಾಗದಲ್ಲಿರಲು ಬಯಸಲಿಲ್ಲ. ಮನೆಗೆ ತರಾತುರಿಯಲ್ಲಿ ನಡೆದುಬಿಡಬೇಕು ಅನಿಸಿತು ಅವನಿಗೆ. ಜಗಳದ ಸಂದರ್ಭದಲ್ಲಿ ತಾರಕಕ್ಕೇರಿದ್ದ ಇಬ್ಬರ ಮಾತುಗಳು ಹಾಗೂ ತನ್ನ ಎದೆಯನ್ನು ಇರಿಯುತ್ತಿರುವ ನೋವು ಶಿಚಿಪ್‌ತ್ಸೋವ್‌ನನ್ನ ಕಂಪಿಸುವಂತೆ ಮಾಡಿ ರಂಗಮಂದಿರದಿಂದ ಬೇಗ ಕಾಲ್ತೆಗೆಯುವಂತೆ ಮಾಡಿತು. ಆ ವೇಳೆ ಶಿಚಿಪ್‌ತ್ಸೋವ್, ತಾನು ಮೇಕಪ್ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ತನಗೆ ಅಂಟಿಸಿದ್ದ ಗಡ್ಡ ತೆಗೆದನೇ ಹೊರತು ಮುಖಕ್ಕೆ ಲೇಪಿಸಿದ್ದ ಬಣ್ಣವನ್ನ ತೆಗೆಯದೆ ಹಾಗೇ ಹೊರಟ.

ತಾನು ಉಳಿದುಕೊಂಡಿದ್ದ ಹೋಟೆಲಿನ ರೂಮು ತಲುಪಿದ ಶಿಚಿಪ್‌ತ್ಸೋವ್ ಬಹಳ ಹೊತ್ತು ತನ್ನ ದೃಷ್ಟಿಯನ್ನ ಮೇಲೆ ಕೆಳಗೆ ಹಾಯಿಸಿ ನಂತರ ಹಾಸಿಗೆ ಮೇಲೆ ಕೂತು ಬಿಗಿಹಿಡಿದ ಮುಷ್ಟಿ ಮೇಲೆ ತನ್ನ ತಲೆ ಆನಿಸಿ ಚಿಂತೆಯಲ್ಲಿ ತೇಲಲು ಆರಂಭಿಸಿದ. ಸದಾ ತಮಾಷೆ ಮಾಡುವ ಸಿಗೇವ್ ಮರುದಿನ ಮಧ್ಯಾಹ್ನ ಎರಡು ಗಂಟೆ ವೇಳೆಗೆ ಶಿಚಿಪ್‌ತ್ಸೋವ್‌ನ ರೂಮು ಒಳಹೊಕ್ಕುವವರೆಗೂ ಆತ ಕದಲದೆ, ಒಂದೂ ಮಾತಾಡದೆ ಹಾಗೇ ಕೂತಿದ್ದ.

‘ರಿಹರ್ಸಲ್‌ಗೆ ಯಾಕೆ ಬರಲಿಲ್ಲ ಶಿಚಿಪ್‌ತ್ಸೋವ್? ಎಲ್ಲಿಗೆ ಹೋಗಿದ್ದೆ?’ ಸಿಗೇವ್